ಸಾಕ್ಷಿಯನ್ನು ದಿ:15.09.2021 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ ಜೆ.ಪಿ ವಕೀಲರಿಂದ:

ನಾನು ಬೆಂಗಳೂರಿನಲ್ಲಿ 1986 ರಿಂದ ವಾಸವಾಗಿದ್ದೇನೆ. 1 ನೇ ವಾದಿ ಕಳೆದ ನಾಲ್ಕು ವರ್ಷಗಳಿಂದ ಆಂಧ್ರ ಪ್ರದೇಶದಲ್ಲಿ ವಾಸವಾಗಿದ್ದಾರೆ. 3 ರಿಂದ 5 ನೇ ವಾದಿಗಳು ಬೌರಿಲಾಲ್‌ಪೇಟ್ ರಾಬರ್ಟಸನ್ ಪೇಟೆಯಲ್ಲಿ ಹುಟ್ಟಿ ಬೆಳೆದಿರುತ್ತಾರೆ. ದಾವಾ ಸ್ವತ್ತಿನ ಸರ್ವೇನಂಬರ್ 65 ಇರಬಹುದು. ಅದರ ವಿಸ್ತೀರ್ಣ 50 ಗುಂಟೆ. ಅದು ಬೀಡು ಭೂಮಿಯಾಗಿದ್ದು ಯಾವುದೇ ಬೆಳೆಯನ್ನು ಬೆಳೆಯುವುದಿಲ್ಲ. ನಾನು ದಾವಾ ಸ್ವತ್ತನ್ನು ಕೊನೆಯದಾಗಿ ನಾಲ್ಕು ವರ್ಷದ ಹಿಂದೆ ನೋಡಿರುತ್ತೇನೆ. ನಾನು ಸ್ವತ್ತನ್ನು ನೋಡುವ ಕಾಲಕ್ಕೆ ಪ್ರತಿವಾದಿಗಳು ಸದರಿ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಜಮೀನಿನಲ್ಲಿ 1974 ರಿಂದಲೂ ಪ್ರತಿವಾದಿಗಳ ತಂದೆ ಮತ್ತು ಪ್ರತಿವಾದಿಗಳು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ ಪ್ರತಿವಾದಿಗ ತಂದೆ ಪಿ.ಎಲ್.ಡಿ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಂದೆ 2010 ರಲ್ಲಿ ಮರಣ ಹೊಂದಿದ ನಂತರ ಪ್ರತಿವಾದಿಗಳು ದಾವಾ ಸ್ವತ್ತಿನ ಖಾತೆಯನ್ನು ಮಾಡಿಸಿಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಾಗಾಲೀ ನನ್ನ ತಂದೆಯಾಗಲೀ ಯಾವ ಕಾಲಕ್ಕೂ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿರಲ್ಲಿಲ್ಲ ಎಂದರೆ ಸಾಕ್ಷಿಯು ನನ್ನ

ತಂದೆಯವರು ವ್ಯವಸಾಯ ಮಾಡುತ್ತಿದ್ದರು ನಾನು ವ್ಯವಸಾಯ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಯಾವ ಕಾಲಕ್ಕೂ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಬೋರ್ವೆಲ್ ಕೋರಿಸಿ ವಿದ್ಯುತ್ ಸಂಪರ್ಕ ಪಡೆದುಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಿಪಿ-2 ರ ಅನ್ವಯ ನನ್ನ ತಂದೆಗೆ ಯಾವುದೇ ಪಹಣಿ ಮ್ಯೂಟೇಶನ್ ಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ನ್ನು ನನ್ನ ತಂದೆ ಮರಣದ ನಂತರ ನಾವೇ ಸೃಷ್ಟಿ ಮಾಡಿಕೊಂಡು ಹಾಕಿರುತ್ತೇವೆ ಎಂದರೆ ಸರಿಯಲ್ಲ. 1977 ರಿಂದ 2018 ರವರೆಗೆ ನನ್ನ ತಂದೆ ಹೆಸರಿನಲ್ಲಿ ಯಾವುದೇ ಪಹಣಿ ಮತ್ತು ಮ್ಯೂಟೇಶನ್ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಯಾವುದೇ ದಾಖಾಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-5 ಕ್ಕಿಂತ ಮುಂಚಿನ ಕಂದಾಯ ದಾಖಾಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ನನ್ನ ತಂದೆ ಪರವಾಗಿ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದರ ಅನ್ವಯ ಯಾವುದೇ ಹಕ್ಕು ಮತ್ತು ಸ್ವಾದೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ನನ್ನ ತಂದೆ ಹೆಸರಿಗೆ ಯಾವುದೇ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ನನ್ನ ತಂದೆ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ದೀಪು ಬಿ.ಸಿ.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಬಂಗಾರಪೇಟೆ.**